# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಸೆಪ್ಟೆಂಬರ್ 2018**, ಬೆಂಗಳೂರು, ಸಂಪುಟ 4, ಸಂಚಿಕೆ 5, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 September 2018**, Bangaluru, Vol. 4, No.5, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription : Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

ವಾಚಾನುರಕ್ಖೀ ಮನಸಾ ಸುಸಂವುತೋ,
ಕಾಯೇನ ಚ ಆಕುಸಲಂ ನ ಕಯಿರಾ, ಏತೇ
ತಯೋ ಕಮ್ಮಪಥೇ ವಿಸೋಧಯೇ,
ಆರಾಧಯೇ ಮಗ್ಗಂ ಇಸಿಪ್ಪವೇದಿತಂ.

ಮಾತಿನಲ್ಲಿ ಎಚ್ಚರದಿಂದಿದ್ದು, ಮನಸ್ಸಿನಲ್ಲಿ ಒಳ್ಳೆಯ ಸಂಯಮ ಹೊಂದಿ ವ್ಯಕ್ತಿಯು ಯಾವುದೇ ಕೆಟ್ಟ ದೈಹಿಕ ಕ್ರಿಯೆ ಮಾಡದಿರಲಿ. ಅವನು ಈ ಮೂರು ರೀತಿಯ ಕ್ರಿಯೆಗಳನ್ನು ಶುದ್ಧಿಮಾಡಿಕೊಳ್ಳಲಿ ಮತ್ತು ಸಂತರು ತೋರಿರುವ ಮಾರ್ಗದಲ್ಲಿ ಜಯಗಳಿಸಲಿ.

**ಧಮ್ಮಪದ – 281, ಮಗ್ಗವಗ್ಗೊ.**

# ಸಂತೋಷದ ಒಂದು ಧರ್ಮ ಜೀವನ

**ಪ್ರಧಾನ ಆಚಾರ್ಯ ಎಸ್.ಎನ್. ಗೋಯಂಕ (1924–2013)**

(ಪ್ರಧಾನ ವಿಪಶ್ಯನ ಆಚಾರ್ಯರಾದ ಪೂಜ್ಯ ಎಸ್.ಎನ್. ಗೋಯಂಕಾಜಿಯವರ ಮೊದಲ ಪುಣ್ಯ ತಿಥಿಯ ಜ್ಞಾಪಕಾರ್ಥ ಸೆಪ್ಟೆಂಬರ್ 2014ರಲ್ಲಿ ತಂದ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದ ವಿಶೇಷ ಸಂಚಿಕೆಯಿಂದ ಅನುವಾದಿಸಲಾಗಿದೆ.)

(ಪೂಜ್ಯ ಗೋಯಂಕಾಜಿಯವರ ಧರ್ಮಪತ್ನಿ ಮತ್ತು ವಿಪಶ್ಯನದ ಪ್ರಧಾನ ಆಚಾರ್ಯರಾದ ಶ್ರೀಮತಿ ಇಲಾಯಚಿದೇವಿ ಗೋಯಂಕ(ಮಾತಾಜಿ) ಅವರು ಗೋಯಂಕಾಜಿಯವರ ಮೊದಲ ಪುಣ್ಯತಿಥಿಯ ಸಂದರ್ಭದಲ್ಲಿ ಆಡಿದ ಗೌರವಾರ್ಪಣೆಯ ಮಾತುಗಳು)

29 ಸೆಪ್ಟೆಂಬರ್ 2014, ಗೋಯಂಕಾಜಿಯವರ ಮೊದಲ ವಾರ್ಷಿಕ ಪುಣ್ಯತಿಥಿಯ ದಿನ. ಇದು ಅವರ ಜನ್ಮದಿನವಾದ ಜನವರಿ 30ರಷ್ಟೇ ಮಹತ್ವಪೂರ್ಣವಾದುದು. ಯಾರೇ ಆಗಲಿ, ಜನ್ಮತಳೆದ ಕೂಡಲೇ ಸಮಾಜದ ಭಾಗವಾಗುತ್ತಾರೆ. ಅವರ ಜೀವಿತ ಕಾಲದಲ್ಲಿ ಅನೇಕ ಕೆಲಸಗಳನ್ನು ಮಾಡುತ್ತಾರೆ. ಅವರ ಒಳ್ಳೆಯ ಮತ್ತು ಕೆಟ್ಟ ಕೆಲಸಗಳು ಅವರ ಮೇಲಷ್ಟೇ ಪರಿಣಾಮ ಬೀರುವುದಿಲ್ಲ, ಸಮಾಜವನ್ನು ಹೊಸ ದಿಕ್ಕಿನೆಡೆಗೆ ನಡೆಸುತ್ತಾ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಬಹಳ ಜನರಿಗೆ ಒಳ್ಳೆಯದಾಗುವ ಕೆಲಸಗಳನ್ನು ಮಾಡಿದ ವ್ಯಕ್ತಿಯನ್ನು ಪೂಜ್ಯ ಭಾವನೆಯಿಂದ, ಪ್ರೀತಿ ಗೌರವಗಳಿಂದ ಕಾಣಲಾಗುತ್ತದೆ. ಗೋಯಂಕಾಜಿಯವರು ಅಂತಹ ವ್ಯಕ್ತಿಗಳಲ್ಲಿ ಒಬ್ಬರು. ಮನುಕುಲವನ್ನು ಎಲ್ಲಾ ದುಃಖಗಳಿಂದ ಬಿಡುಗಡೆಗೊಳಿಸಲು ಭಗವಾನ್ ಗೌತಮಬುದ್ಧರು ಪುನಃ ಕಂಡುಹಿಡಿದ ಸಾರ್ವತ್ರಿಕ ಧರ್ಮ ಮಾರ್ಗವಾದ ವಿಪಶ್ಯನ ಧ್ಯಾನವನ್ನು ಗೋಯಂಕಾಜಿಯವರು ವಿಶ್ವಕ್ಕೆ ಕೊಡುಗೆಯಾಗಿ ಕೊಟ್ಟರು. ಈ ಕೊಡುಗೆಯ ಫಲವಾಗಿ, ಅವರು ತೋರಿಸಿದ ಮಾರ್ಗದಲ್ಲಿ ನಡೆಯುತ್ತಾ ಬಹಳ ಜನರು ಪ್ರಯೋಜನ ಪಡೆದಿದ್ದಾರೆ ಮತ್ತು ಮುಂದೆಯೂ ಪಡೆಯುತ್ತಾರೆ. ಗೋಯಂಕಾಜಿಯವರ ಈ ಮೊದಲ ವಾರ್ಷಿಕ ಪುಣ್ಯತಿಥಿ, ಜೀವನಪರ್ಯಂತ ಅವರು ಮಾಡಿದ ಒಳ್ಳೆಯ ಕೆಲಸಗಳನ್ನು ನಮ್ಮೆಲ್ಲರಿಗೂ ಜ್ಞಾಪಿಸುವುದಷ್ಟೇ ಅಲ್ಲ, ಧಮ್ಮದಲ್ಲಿ ನಾವು ಬೆಳೆಯಲು ಮತ್ತು ಅವರು ಬೋಧಿಸಿದ ಧರ್ಮವನ್ನು ಉಳಿಸಿಕೊಂಡು ಮತ್ತು ಮುಂದುವರಿಸಿಕೊಂಡು ಹೋಗಲು ನಮಗೆ ಪ್ರೇರಣೆಯಾಗಬೇಕು.

ಗೋಯಂಕಾಜಿಯವರ ಧರ್ಮಪತ್ನಿಯಾಗಿ, ಸುಮಾರು 72 ವರ್ಷಗಳ ಕಾಲ ಅವರ ನಿಕಟವರ್ತಿಯಾಗಿರುವ ಅವಕಾಶ ನನ್ನದಾಗಿತ್ತು. ಇಂದು ದೈಹಿಕವಾಗಿ ಅವರು ನನ್ನ ಜೊತೆಯಲ್ಲಿಲ್ಲದಿದ್ದರೂ ಅವರ ಜೊತೆಗಿನ ನನ್ನ ಆಪ್ತತೆ ಮುಂದುವರಿಯುತ್ತಿದೆ. ಅನೇಕ ಧ್ಯಾನ ಸಾಧಕರು ಈ ಹಿಂದಿನಂತೆಯೇ ಇಂದೂ ಅವರಿಂದ ಬರುತ್ತಿರುವ ಮೈತ್ರಿಯನ್ನು ಅನುಭವಿಸುತ್ತಿದ್ದಾರೆ. ಇದು ಬಹಳ ಸತ್ಯ. ಮತ್ತು ಎಲ್ಲಿಯವರೆಗೆ ನಾವು ಅವರು ತೋರಿಸಿರುವ ಮಾರ್ಗದಲ್ಲಿ ನಡೆಯುತ್ತೇವೆಯೋ ಅಲ್ಲಿಯವರೆಗೆ ಅವರು ನಮಗೆ ತುಂಬಾ ಹತ್ತಿರವಿರುತ್ತಾರೆ.

ಪರಿಶುದ್ಧ ಧರ್ಮವನ್ನು ಅಭ್ಯಾಸ ಮಾಡುತ್ತಾ ಪ್ರಯೋಜನ ಪಡೆದಿರುವವರನ್ನು ನೆನೆದಾಗ ನನ್ನ ಮನಸ್ಸು ಬಹಳ ಆನಂದದಿಂದ ತುಂಬುತ್ತದೆ. ಇದು ಗೋಯಂಕಾಜಿಯವರ ಒಳ್ಳೆಯ ಪ್ರಯತ್ನಗಳಿಂದ ಬಂದಿದೆ. ಈಗ ನಾವು, ಅವರು ನಡೆದ ದಾರಿಯಲ್ಲಿ ನಡೆಯಲೇಬೇಕು. ಅವರ ಗುರುಗಳಾದ ಸಯಾಜಿ ಉ ಬಾ ಖಿನ್‌ರವರ ಸೂಚನೆಗಳಂತೆ ಅವರು ಶ್ರದ್ಧೆಯಿಂದ ಸೇವೆ ಮಾಡಿದರು. ಈಗ ನಾವು ಅದೇ ರೀತಿ ಮುಂದುವರಿಯುವ ನಿರ್ಧಾರ ಮಾಡಬೇಕು. ಅವರ ಬೋಧನೆಗೆ ಯಾವುದನ್ನೂ ಸೇರಿಸದೆ ಅಥವಾ ಯಾವುದನ್ನೂ ತೆಗೆದುಹಾಕದೆ, ಅವರು ತೋರಿಸಿದ ಮಾರ್ಗದಲ್ಲಿ ನಡೆದರೆ ಮಾತ್ರ ಇದು ಸಾಧ್ಯವಾಗುತ್ತದೆ. ಅವರ ವಾರ್ಷಿಕ ಪುಣ್ಯತಿಥಿಯಂದು ಅವರಿಗೆ ಗೌರವ ತೋರಿಸಲು, ಅವರ ಋಣ ತೀರಿಸಲು ಇರುವುದು ಇದೊಂದೇ ಮಾರ್ಗ.

ಗೋಯಂಕಾಜಿಯವರು ಯಾವಾಗಲೂ ಹೇಳುತ್ತಿದ್ದರು, ಧರ್ಮವು ನಮ್ಮ ಕ್ರಿಯೆಗಳಲ್ಲಿ ಪ್ರಕಟಗೊಳ್ಳಬೇಕು. ನಮ್ಮ ನಿತ್ಯದ ಜೀವನದಲ್ಲಿ ಧರ್ಮವನ್ನು ಪರಿಶುದ್ಧ ರೂಪದಲ್ಲಿ ನಿಜವಾಗಿಸಿಕೊಳ್ಳಬೇಕು. ಅವರ ಜೀವನದಿಂದ ನಾವು ಸ್ಫೂರ್ತಿ ಪಡೆಯೋಣ. ಅವರು ಪ್ರೀತಿಯಿಂದ ತೋರಿಸಿದ ಮಾರ್ಗವನ್ನು ಅನುಸರಿಸಿ ನಾವು ಗುಣವಂತರಾಗೋಣ, ಸದಾಚಾರದ ಜೀವನ ನಡೆಸೋಣ. ಅದರಲ್ಲಿ ಮಾತ್ರ ಪ್ರತಿಯೊಬ್ಬರ ಕಲ್ಯಾಣವಿದೆ.

ಆಶೀರ್ವಾದ ಮತ್ತು ಮೈತ್ರಿಗಳೊಂದಿಗೆ

**ಇಲಾಯಚಿದೇವಿ ಸತ್ಯನಾರಾಯಣ ಗೋಯಂಕ.**

## ಗೋಯಂಕಾಜಿಯವರೊಡನೆ ನನ್ನ ಅನುಭವಗಳು

ನನ್ನ ಹೆಸರು ರಾವ್‌ಪ್ರತಾಪ್ ಯಾದವ್. ನಾನು ಪೂಜ್ಯ ಗೋಯಂಕಾಜಿಯವರಿಗೆ ಆಪ್ತ ಸಹಾಯಕನಾಗಿದ್ದೆ. ನಾನು ಧಮ್ಮಗಿರಿಯಲ್ಲಿ ವಾಸಿಸುತ್ತಿದ್ದೇನೆ. ಗೋಯಂಕಾಜಿಯವರ ನಿವಾಸಸ್ಥಾನದಲ್ಲಿನ ಸಣ್ಣ ಕಛೇರಿಯಲ್ಲಿ ಕೆಲಸಮಾಡುತ್ತಿದ್ದೇನೆ. ಗೋಯಂಕಾಜಿಯವರು ಇದ್ದಾಗ ಕೆಲಸ ಮಾಡುತ್ತಿದ್ದಂತೆಯೇ ಈಗಲೂ ನಾನು ಕೆಲಸ ಮಾಡುತ್ತಿದ್ದೇನೆ. ಇಂದು ಮೆತ್ತಾ (ಮೈತ್ರಿಯ) ದಿನ. ಪ್ರಪ್ರಥಮವಾಗಿ ಸ್ಥಾಪನೆಯಾದ ವಿಪಶ್ಯನ ಧ್ಯಾನ ಕೇಂದ್ರದ ಕಡೆಗೆ ನಾನು ನೋಡುತ್ತಿದ್ದೇನೆ. ಅದು ಎಷ್ಟೊಂದು ಅದ್ಭುತವಾಗಿ ಕಾಣುತ್ತಿದೆ! ವಿಶಾಲವಾದ ಧ್ಯಾನ ಮಂದಿರಗಳು, ಸುಂದರವಾದ ಹಸಿರು, ಗೋಯಂಕಾಜಿಯವರ ನಿವಾಸ ಸ್ಥಾನದ ಸುತ್ತ ವರ್ಣರಂಜಿತ ಎಲೆಗಳು, ಹಿಂಭಾಗದಲ್ಲಿ ಸುಂದರವಾದ ಬಂಗಾರದ ಬಣ್ಣದ ಪಗೋಡ. ವಿದ್ಯಾರ್ಥಿಗಳ ಹೊಳೆಯುವ ಮುಖಗಳು, ಅವರ ಮಂದಹಾಸ ಈ ಕ್ಷಣದಲ್ಲಿ ನನಗೆ ಆನಂದ ನೀಡುತ್ತಿವೆ; ನನ್ನನ್ನು ಸಂತೋಷದಿಂದ ತುಂಬಿವೆ. ವಿದ್ಯಾರ್ಥಿಗಳಿಗೆ ಮತ್ತು ಆಚಾರ್ಯರುಗಳಿಗೆ ಆಧುನಿಕ ಸವಲತ್ತುಗಳನ್ನು ಹೊಂದಿರುವ ನಿವಾಸ ಸ್ಥಾನಗಳಿವೆ. ಪ್ರತಿ ದಿನ, ಮತ್ತು ಯಾವಾಗಲೂ, ಸರಿಯಾದ ಸಮಯಕ್ಕೆ, ಸುಮಾರು 1000 ಜನರಿಗೆ ರುಚಿಕರವಾದ ಮತ್ತು ಆರೋಗ್ಯಕರವಾದ ಊಟವನ್ನು ಭೋಜನಾಲಯಗಳಲ್ಲಿ ನೀಡಲಾಗುತ್ತಿದೆ. ಮಳೆಗಾಲವಾಗಿರುವುದರಿಂದ ಹತ್ತಿರದ ಬೆಟ್ಟಗಳಿಂದ ಧುಮ್ಮಿಕ್ಕುತ್ತಿರುವ ಜಲಪಾತಗಳು ಈ ಸ್ಥಳವನ್ನು ಮನಮೋಹಕಗೊಳಿಸಿವೆ. ಇದನ್ನೆಲ್ಲಾ ನೋಡುತ್ತಿದ್ದರೆ, ಗೋಯಂಕಾಜಿಯವರ ಜೊತೆಗಿನ ಆರಂಭಿಕ ದಿನಗಳ ನೆನಪು ಮರುಕಳಿಸುತ್ತದೆ. ಅವರ ಅಸಾಧಾರಣ ಪ್ರಯಾಣದ ನೆನಪು, ಒಂದು ಸಿನಿಮಾದ ತರಹ ಮನಸ್ಸಿನ ಪರದೆಯ ಮೇಲೆ ಸ್ಪಷ್ಟವಾಗಿ ಮೂಡುತ್ತದೆ. ಹೋಲಿಕೆ ಮಾಡಲಾಗದ ನಂಬಿಕೆ, ಶ್ರದ್ಧೆ ಮತ್ತು ದೃಢನಿಶ್ಚಯದ ಪ್ರಯತ್ನದಿಂದ ದಾರಿಯುದ್ದಕ್ಕೂ ಅನೇಕ ಸವಾಲುಗಳಿದ್ದಾಗ್ಯೂ, ಈ ಪ್ರಯಾಣವನ್ನು ನಿರ್ವಹಿಸಿದರು.

ನನ್ನನ್ನೇ ನಾನು ಅದೃಷ್ಟಶಾಲಿ ಎಂದು ಪರಿಗಣಿಸಿಕೊಳ್ಳುತ್ತೇನೆ. ಏಕೆಂದರೆ ಜೂನ್ 1969 ರಲ್ಲಿ ಗೋಯಂಕಾಜಿಯವರು ಭಾರತಕ್ಕೆ ಬಂದ ತಕ್ಷಣ ಅವರ ಸೇವೆ ಮಾಡುವ ಅದ್ಭುತ ಅವಕಾಶ ನನಗೆ ದೊರೆಯಿತು. ಅವರು ಮುಂಬಯಿಗೆ ಬಂದ ಮಾರನೇ ದಿನವೇ ಅವರ ಕಿರಿಯ ಸಹೋದರ ಶ್ಯಾಮಸುಂದರ್‌ರವರ ಕಾಲ್ಬಾದೇವಿ ರಸ್ತೆಯಲ್ಲಿದ್ದ ಐದನೇ ಮಹಡಿಯ ಕಛೇರಿಗೆ ಆಗಮಿಸಿದರು. ಹಿಂದಿಯಲ್ಲಿ

ಪತ್ರವ್ಯವಹಾರ ಮಾಡುವುದಕ್ಕಾಗಿ ನನ್ನನ್ನು ಕರೆಸಲಾಯಿತು. ಸುಮಾರು 200 ಹೆಸರು ಮತ್ತು ವಿಳಾಸಗಳಿದ್ದ ಪಟ್ಟಿಯನ್ನು ಅವರು ತಮ್ಮ ಜೊತೆ ತಂದಿದ್ದರು. ಗೋಯಂಕಾಜಿಯವರ ವಿಪಶ್ಯನ ಆಚಾರ್ಯರಾದ ಪೂಜ್ಯ ಶ್ರೀ ಸಯಾಜಿ ಉ ಬಾ ಖಿನ್‌ರವರು ವಿಪಶ್ಯನ ಧ್ಯಾನ ಬೋಧಿಸಲು ಅವರನ್ನು ನೇಮಕ ಮಾಡಿದ್ದಾರೆ ಮತ್ತು ಮುಂಬಯಿಯಲ್ಲಿ ಹತ್ತು ದಿನಗಳ ಶಿಬಿರ ಏರ್ಪಡಿಸಲಾಗಿದೆ ಎಂದು ಇವರೆಲ್ಲರಿಗೆ ತಿಳಿಸಬೇಕಾಗಿತ್ತು. ಈ ಶಿಬಿರದಲ್ಲಿ ಭಾಗವಹಿಸಬಯಸುವವರು ಅಥವಾ ಸ್ಥಳೀಯವಾಗಿ ಶಿಬಿರ ಆಯೋಜಿಸ ಬಯಸುವವರು ತಕ್ಷಣ ಉತ್ತರಿಸಲು ಸೂಚಿಸಬೇಕಾಗಿತ್ತು. ಪತ್ರ ವ್ಯವಹಾರ ಪ್ರಾರಂಭವಾಯಿತು. ಮುಂಬಯಿಯಲ್ಲದೆ, ಅನೇಕ ಕಡೆಗಳಿಂದ ಶಿಬಿರಕ್ಕಾಗಿ ಕೋರಿಕೆಗಳು ಬಂದವು. ಇವುಗಳಲ್ಲಿ ಚೆನ್ನೈ, ಸಾರನಾಥ್, ಕೋಲ್ಕತ್ತಾ, ದೆಹಲಿ, ತಾಡೇಪಲ್ಲಿಗುಡಮ್(ಆಂಧ್ರಪ್ರದೇಶ), ವಾಧೋಗಂಜ್(ಉತ್ತರ ಪ್ರದೇಶ) ಮತ್ತು ಅಜ್ಮೀರ್(ರಾಜಸ್ಥಾನ) ಪ್ರಮುಖವಾದವುಗಳು.

ಹತ್ತು ದಿನಗಳ ಪ್ರಥಮ ಶಿಬಿರವನ್ನು ಜುಲೈ 3 ರಿಂದ 13ರವರೆಗೆ ಪಂಚಾಯತ್‌ವಾಡಿ ಎಂಬ ಹೆಸರಿನ ಧರ್ಮಛತ್ರದಲ್ಲಿ ಆಯೋಜಿಸಲಾಯಿತು. ಧ್ಯಾನ ಮಂದಿರ ಬಹಳ ವಿಶಾಲವಾಗಿತ್ತು. ಆದರೆ ಭಾಗವಹಿಸಿದ ವಿದ್ಯಾರ್ಥಿಗಳು ಕೇವಲ 14. ಆದಾಗ್ಯೂ ಗೋಯಂಕಾಜಿಯವರು ಉಳಿದುಕೊಳ್ಳುವುದಕ್ಕೆ ಸರಿಯಾದ ಸ್ಥಳವಿರಲಿಲ್ಲ. ಧ್ಯಾನಮಂದಿರದ ಮೇಲ್ಭಾಗದಲ್ಲಿ ಒಂದು ಕೊಠಡಿ ಇತ್ತು. ಈ ರೂಮಿಗೆ ಹೋಗಬೇಕಾದರೆ, ಗೋಯಂಕಾಜಿಯವರು ಅನೇಕ ಮೆಟ್ಟಿಲುಗಳನ್ನು ಹತ್ತಿ–ಇಳಿಯಬೇಕಾಗುತ್ತಿತ್ತು ಮತ್ತು ಮಹಿಳೆಯರ ವಾಸಸ್ಥಾನವನ್ನು ಹಾಯ್ದು ಹೋಗಬೇಕಾಗಿತ್ತು. ಆದ್ದರಿಂದ, ವಿಶಾಲವಾದ ಧ್ಯಾನಮಂದಿರದ ಒಂದು ತುದಿಯಲ್ಲಿ ಪರದೆಗಳನ್ನು ಕಟ್ಟಿಸಿ ವಾಸಸ್ಥಾನಕ್ಕೆ ವ್ಯವಸ್ಥೆ ಮಾಡಿಸಿಕೊಂಡರು. ಧ್ಯಾನ ಮಂದಿರಕ್ಕೆ ಪ್ರವೇಶದ್ವಾರ ಒಂದೇ ಇತ್ತು. ಪರದೆಯ ಎದುರಿಗೆ ಆಚಾರ್ಯರ ಪೀಠವಿತ್ತು. ಇದ್ದ ಕೆಲವೇ ಶೌಚಾಲಯುಗಳನ್ನು ಸರತಿ ಸಾಲಿನಲ್ಲಿ ನಿಂತು ಜನರು ಉಪಯೋಗಿಸುತ್ತಿದ್ದರು. ಗೋಯಂಕಾಜಿಯವರು ಶೌಚಾಲಯವನ್ನು ಉಪಯೋಗಿಸಬೇಕಾದರೆ, ಯಾವುದಾದರೂ ಶೌಚಾಲಯ ಖಾಲಿ ಇದೆಯೇ ಎಂದು ವಿಚಾರಿಸುತ್ತಿದ್ದರು.

ಎಲ್ಲಾ ರೀತಿಯಿಂದಲೂ ಶಿಬಿರ ಸುಸೂತ್ರವಾಗಿ ನಡೆಯುತ್ತಿತ್ತು. ಆದರೆ, ಐದನೇ ದಿನ ನಾನು ಮತ್ತು ಇತರೆ ಕೆಲವು ವಿದ್ಯಾರ್ಥಿಗಳು ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದೆವು. ಎಲ್ಲಿ ತಪ್ಪಾಗಿರಬಹುದು ಎಂದು ಗೋಯಂಕಾಜಿಯವರು ಆತಂಕ ಪಟ್ಟರು. ಊಟದಿಂದ ಏನಾದರೂ ತೊಂದರೆಯಾಗಿರಬಹುದೇ ಎಂದು ಮೊದಲು ಚಿಂತಿಸಿದರು. ಡಾಕ್ಟರರನ್ನು ಕರೆಸಿ ನಮಗೆ ಚಿಕಿತ್ಸೆ ಕೊಡಿಸಿದರು. ಜ್ವರಕ್ಕೆ ಕೊಟ್ಟ ಔಷಧಿಯಿಂದ ಮಾರನೇ ದಿನ ನನಗೆ ಸ್ವಲ್ಪ ಆರಾಮ ಎನಿಸಿತು. ನಂತರ ಹೆಚ್ಚಿನ ಪರಿಶೀಲನೆ ಮಾಡಿ ಗೋಯಂಕಾಜಿಯವರು ನನ್ನ ಕಛೇರಿಯಲ್ಲಿ ನನ್ನನ್ನು ಸಂಧಿಸಿ ನಾನು ಬೇರೆ ಯಾವುದಾದರೂ ಧ್ಯಾನ ಮಾರ್ಗವನ್ನು ಅಭ್ಯಾಸ ಮಾಡುತ್ತಿದ್ದೇನೆಯೇ ಎಂದು ವಿಚಾರಿಸಿದರು. ದಿನಕ್ಕೆ ಎರಡು ಬಾರಿ, ಅರ್ಧಗಂಟೆಯ ಕಾಲ ಆನಂದ ಮಾರ್ಗದ ಸಾಧನೆ ಮಾಡುತ್ತೇನೆ ಎಂದು ನಾನು ಗೋಯಂಕಾಜಿಯವರಿಗೆ ತಿಳಿಸಿದೆ. "ಓ, ಇತರೆ ವಿದ್ಯಾರ್ಥಿಗಳ ಜೊತೆ ನೀವು ಕಾಯಿಲೆ ಬಿದ್ದಿದ್ದರಲ್ಲಿ ಆಶ್ಚರ್ಯವಿಲ್ಲ" ಎಂದು ಹೇಳಿದರು. ಮುಂದುವರಿದು ಅವರು ವಿವರಿಸಿದರು, "ಇದು ಬೀಜ ಮಂತ್ರ (ಬಲವಾದ ತರಂಗಗಳನ್ನು ಉತ್ಪತ್ತಿ ಮಾಡುವ ಶಬ್ದದ ಪುನರುಚ್ಚಾರ) ಆಧಾರಿತ ಸಾಧನೆ. ನಾನು ಬೋಧಿಸುತ್ತಿರುವುದು ಬೇರೆಯದೇ ಮಾರ್ಗ. ಇದು ಪ್ರಕೃತಿಯ ನಿಯಮವನ್ನು ಆಧರಿಸಿದೆ. ಎರಡೂ ಒಂದೇ ಸೂರಿನಡಿ ಇರಲು ಸಾಧ್ಯವಿಲ್ಲ. ನೀವು ಮಂತ್ರೋಚ್ಚಾರದ ಅಭ್ಯಾಸವನ್ನು ನಿಲ್ಲಿಸಬೇಕು. ಅಥವಾ ಈ ಶಿಬಿರದಿಂದ ನಿರ್ಗಮಿಸಬೇಕು." "ಇನ್ನು ಮುಂದೆ ನಾನು ಇದನ್ನು ಮನೆಯಲ್ಲಿ ಮಾತ್ರ ಅಭ್ಯಾಸ ಮಾಡುತ್ತೇನೆ, ಇದರ ಅಭ್ಯಾಸವನ್ನು ಕೈಬಿಡಲು ಸಾಧ್ಯವಾಗದಿರಬಹುದು" ಎಂದು ಹೇಳಿದೆ. ಅತ್ಯಂತ ಸಹಾನುಭೂತಿಯಿಂದ ಎರಡು ಸಾಧನೆಗಳಿಗೂ ಇರುವ ವ್ಯತ್ಯಾಸವನ್ನು ವಿವರಿಸಿದರು. ಮಂತ್ರ ಜಪಿಸುವುದನ್ನು ಬಿಟ್ಟು ಕೇವಲ ವಿಪಶ್ಯನವನ್ನು ಅಭ್ಯಾಸ ಮಾಡಿದರೆ ನನಗೆ ಏನೂ ತೊಂದರೆಯಾಗುವುದಿಲ್ಲ ಎಂಬ ಆಶ್ವಾಸನೆ ಕೊಟ್ಟರು. ನಕ್ಕು ಹೇಳಿದರು, "ಭವಿಷ್ಯದಲ್ಲಿ ಅನೇಕ ಶಿಬಿರಗಳನ್ನು ಆಯೋಜಿಸಲಾಗುವುದು. ಆದ್ದರಿಂದ ಪ್ರಾರಂಭದಿಂದಲೇ ಭದ್ರ ಬುನಾದಿ ನಿರ್ಮಿಸುವುದು ಉತ್ತಮ."

ಕ್ಷೋಭೆಗೊಂಡ ಮನಸ್ಸಿನಿಂದ ನಾನು ಒಪ್ಪಿದೆ. ಅವರು ನನ್ನನ್ನು ಧ್ಯಾನ ಮಂದಿರಕ್ಕೆ ಕರೆದುಕೊಂಡು ಹೋಗಿ ಆನಾಪಾನ ಬೋಧಿಸಿದರು. ಶಿಬಿರದ ಅರ್ಧಭಾಗ ಮುಗಿದಿತ್ತು. ಇದಕ್ಕಿಂತ ಹೆಚ್ಚಿನದೇನನ್ನೂ ಮಾಡಲು ಸಾಧ್ಯವಿರಲಿಲ್ಲ. ಕೇವಲ ಉಸಿರಿನ ಜೊತೆ ಕೆಲಸ ಮಾಡಲು ನನಗೆ ಸೂಚಿಸಲಾಯಿತು. ಅದರಂತೆಯೇ ನಾನು ಮಾಡಿದೆ. ಎಲ್ಲ ಅಡತಡೆಗಳೂ ನಿಂತವು. ಶಿಬಿರವು ಶಾಂತಿಯಿಂದ ಮುಕ್ತಾಯವಾಯಿತು.

ಮುಂದಿನ ಶಿಬಿರವನ್ನು ಆಗಸ್ಟ್ 24ರಿಂದ ಸೆಪ್ಟಂಬರ್ 3ರ ವರೆಗೆ ಚೆನ್ನೈನಲ್ಲಿ ನಡೆಸಲು ನಿಗದಿಪಡಿಸಲಾಯಿತು. ಶಿಬಿರ ಪ್ರಾರಂಭವಾಗುವ ಹದಿನೈದು ದಿನಗಳ ಮೊದಲೇ ನಾವು ಜೊತೆಯಾಗಿ ಚೆನ್ನೈಗೆ ಪ್ರಯಾಣಿಸಿ, ಗೋಯಂಕಾಜಿಯವರ ಅಣ್ಣ ಬಾಲಕೃಷ್ಣರವರ ಜೊತೆಗೆ ಉಳಿದೆವು. ಅಲ್ಲಿ ನಾನು ಧ್ಯಾನದ ಅಭ್ಯಾಸ ಮಾಡಬೇಕಾದರೆ, ಒಂದು ದಿನ, ಇದ್ದಕ್ಕಿಂದ್ದಂತೆ ಇರುವೆಯೊಂದು ನನ್ನ ಮೂಗಿನ ಕೆಳಗೆ ಹರಿದಾಡಿದಂತಾಯಿತು. ಅದನ್ನು ತೆಗೆಯಲು ಕೈಯಿಂದ ಸವರಿಕೊಂಡೆ. ಆದರೆ, ಕಣ್ಣುಮುಚ್ಚಿದ ತಕ್ಷಣ ಅದು ಪುನಃ ಮರಳಿ ಬಂದಂತೆನಿಸಿತು. ಈ ಹೊಸ ಸಮಸ್ಯೆಯಿಂದ ಗೊಂದಲಗೊಂಡೆ. ಗೋಯಂಕಾಜಿಯವರಿಂದ ಡಿಕ್ಟೇಷನ್(ಹೇಳಿ ಬರೆಸುವಿಕೆ, ಉಕ್ತಲೇಖನ) ತೆಗೆದುಕೊಂಡ ಮೇಲೆ, ಇದರ ಬಗ್ಗೆ ಅವರನ್ನು ಕೇಳಿದೆ. ಅದಕ್ಕೆ ಗಮನ ಕೊಡಬೇಡ ಎಂದಷ್ಟೇ ಸಲಹೆ ಕೊಟ್ಟರು. "ಕೇವಲ ಉಸಿರಿನ ಮೇಲೆ ಕೇಂದ್ರೀಕರಿಸು. ಹತ್ತು ದಿನದ ಶಿಬಿರದಲ್ಲಿ ನಾನು ನಿನಗೆ ಎಲ್ಲಾ ಹೇಳುತ್ತೇನೆ" ಎಂದರು.

ಆಗಸ್ಟ್ 24 ರಂದು ಶಿಬಿರ ಪ್ರಾರಂಭವಾದಾಗ, ನಾನು ವಿದ್ಯಾರ್ಥಿಯಾಗಿ ಶಿಬಿರ ಸೇರಿದೆ. ಆದರೆ ಪತ್ರ ವ್ಯವಹಾರಕ್ಕೆ ಸಂಬಂಧಿಸಿದ ನನ್ನ ಕೆಲಸ ಮುಂದುವರಿಯಿತು. ಅವಶ್ಯಕತೆ ಬಿದ್ದಾಗಲೆಲ್ಲಾ ನಾನು ಡಿಕ್ಟೇಷನ್ ತೆಗೆದುಕೊಳ್ಳುತ್ತಿದ್ದೆ ಮತ್ತು ಮಧ್ಯರಾತ್ರಿಯವರೆಗೆ ಅದನ್ನು ಟೈಪ್(ಬೆರಳಚ್ಚು) ಮಾಡುತ್ತಿದ್ದೆ ಮತ್ತು ಶಿಬಿರದ ವೇಳಾಪಟ್ಟಿಯಂತೆ ಧ್ಯಾನ ಮಾಡುತ್ತಿದ್ದೆ. ದೀರ್ಘಾವಧಿಯ ಆನಾಪಾನದ ಅಭ್ಯಾಸವು ನನಗೆ ಫಲನೀಡಿತು. ವಿಪಶ್ಯನ ಕೊಟ್ಟಾಗ, ದೇಹದ ಎಲ್ಲಾ ಭಾಗಗಳಲ್ಲಿ ಸಂವೇದನೆಗಳ ಅನುಭವವಾಯಿತು. ಆದಾಗ್ಯೂ, ನಾನು ಈ ಹಿಂದೆ ಅಭ್ಯಾಸ ಮಾಡುತ್ತಿದ್ದ ಬೇರೆಯ ಸಾಧನೆ ನನಗೆ ದೊಡ್ಡ ಸವಾಲುಗಳನ್ನು ತಂದೊಡ್ಡಿತು. ನಾನು ನನ್ನ ಹಳೆಯ ಸಾಧನ ಮಾರ್ಗವನ್ನು ಕೈಬಿಟ್ಟಿದ್ದೇನೆ ಎಂಬ ವಾಸ್ತವದ ಬಗ್ಗೆಯೇ ನಾನು ಹೋರಾಟ ಮಾಡಬೇಕಾಯಿತು. ನನ್ನ ಈ ತೊಂದರೆಗಳ ಬಗ್ಗೆ ಗೋಯಂಕಾಜಿಯವರು ರಂಗೂನ್‌ನಲ್ಲಿದ್ದ ತಮ್ಮ ಅಣ್ಣ ಬಾಬುಲಾಲ್‌ರವರಿಗೆ ವಿವರವಾದ ಪತ್ರಬರೆದು, ಅದನ್ನು ಸಯಾಜಿ ಉ ಬಾ ಖಿನ್‌ರವರಿಗೆ ತಲುಪಿಸಲು ಕೋರಿದ್ದರು. ನನ್ನ ಮನಸ್ಸಿನ ಪ್ರಕ್ಷುಬ್ಧ ಸ್ಥಿತಿಯನ್ನು ಎದುರಿಸಲು ಸಯಾಜಿಯವರ ಶಕ್ತಿಯುತವಾದ ಮೈತ್ರಿ(ಮೆತ್ತಾ) ನನಗೆ ಸಹಾಯಮಾಡಿತು. ಮನಸ್ಸಿನಲ್ಲಿ ಎದ್ದ ಬಿರುಗಾಳಿಗಳು ನಿಂತವು. ಈ ಸಹಾಯಕ್ಕಾಗಿ ನಾನು ಅಗಾಧವಾದ ಅದೃಷ್ಟವಂತನಾಗಿದ್ದೆ ಎನಿಸುತ್ತದೆ.

ಆಗಿನ ಕಾಲದಲ್ಲಿ, ಶಿಬಿರಗಳು ನಡೆಯುತ್ತಿದ್ದ ಧರ್ಮಶಾಲೆಗಳು ಅಸಾಧಾರಣವಾದ ಮತ್ತು ಕೆಲವೊಮ್ಮೆ ಕ್ಲಿಷ್ಟಕರವಾದ ಸಮಸ್ಯೆಗಳಿಂದ ತುಂಬಿರುತ್ತಿದ್ದವು. ಆ ಸಮಯದಲ್ಲಿ ಗೋಯಂಕಾಜಿಯವರು ಅನೇಕ ಎಡರು ತೊಡರುಗಳನ್ನು ಸಹಿಸಿಕೊಳ್ಳಬೇಕಾಗಿತ್ತು. ಆದರೆ ಅವರ ಹಣೆಯ ಮೇಲೆ ಅಸಂತೋಷದ ಒಂದು ಚಿಕ್ಕ ಗೆರೆಯನ್ನೂ ಸಹ ನಾನು ಯಾವಾಗಲೂ ನೋಡಲಿಲ್ಲ. ಅವರು ಹೇಳುತ್ತಿದ್ದರು, "ನಾವು ತೊಂದರೆಗಳಿಗೆ ತಯಾರಾಗಿ ಬಂದಿರುವುದರಿಂದ, ನಾವು ದೂರುವಂಥದ್ದು ನಿಜವಾಗಿ ಏನೂ ಇಲ್ಲ; ವಿದ್ಯಾರ್ಥಿಗಳೂ ಸಹ ಅಂತಹ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ."

ಅಂತಹದೇ ಒಂದು ಶಿಬಿರವನ್ನು ಗುಜರಾತಿನ ಅಹಮದಾಬಾದ್ ನಗರದ ಹತ್ತಿರವಿರುವ ಸಾದ್ರ ಎಂಬ ಪುಟ್ಟ ಹಳ್ಳಿಯಲ್ಲಿ ನಡೆಸಲಾಯಿತು. ಈ ವಿಶಿಷ್ಟವಾದ ಶಿಬಿರದಲ್ಲಿ ವಿದ್ಯಾರ್ಥಿಗಳೇ ಶಿಬಿರದ ಕೆಲಸಗಳನ್ನು ನಿರ್ವಹಿಸಲು ಮುಂದೆ ಬಂದರು. ಅಡಿಗೆ ಮಾಡುವುದಕ್ಕೆ ಬಯಲಿನಲ್ಲಿ ಒಂದು ಅಡಿಗೆ ಒಲೆಯನ್ನೂ ಅವರೇ ನಿರ್ಮಿಸಿದರು. ವಿದ್ಯಾರ್ಥಿಗಳ ಸಾಧನೆಯ ಪರಿಶೀಲನೆಯ (checking) ನಂತರ, ಎಲ್ಲಾ ವಿದ್ಯಾರ್ಥಿಗಳು, ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳು, ಒಟ್ಟಿಗೆ ಸೇರಿ ಮಧ್ಯಾಹ್ನದ ಊಟಕ್ಕೆ ಅಡಿಗೆ ಸಿದ್ಧಮಾಡಿ, ಊಟದ ನಂತರ ಎಲ್ಲವನ್ನೂ ಸ್ವಚ್ಛ ಮಾಡುತ್ತಿದ್ದರು. ಶಿಬಿರಾರ್ಥಿಗಳು ಬಹಳ ಬಡವರಿದ್ದಾರೆ, ಅವರಿಂದ ನೀನು ಏನನ್ನೂ ಕೇಳಬಾರದು, ಅವರು ಏನು ಕೊಡುತ್ತಾರೋ ಅದನ್ನು ಸ್ವೀಕರಿಸಬೇಕು ಮತ್ತು ಅದನ್ನು ಪ್ರಶ್ನಿಸಬಾರದು ಎಂದು ಗೋಯಂಕಾಜಿಯವರು ಮೊದಲೇ ನನಗೆ ಸೂಚಿಸಿದ್ದರು. ಮೊದಲನೇ ದಿನ ಗೋಯಂಕಾಜಿಯವರಿಗೆ ಊಟ ತರಲು ಹೋಗಿ ಬೇಯಿಸಿದ ಒಂದು ತರಕಾರಿ, ಕಾಳಿನ ಸಾರು, ಅರ್ಧ ಬೆಂದ ಎಣ್ಣೆಯಿಲ್ಲದ ರೋಟಿ, ಅರ್ಧ ಈರುಳ್ಳಿ ಮತ್ತು ಮಜ್ಜಿಗೆ ತಂದೆ. ಊಟ ಪ್ರಾರಂಭಿಸುವ ಮೊದಲು, ಗೋಯಂಕಾಜಿಯವರು ಪುನಃ ನನ್ನನ್ನು ಕೇಳಿದರು, "ನೀನು ಏನನ್ನೂ ಕೇಳಲಿಲ್ಲ ಅಲ್ಲವೆ?" ಇಲ್ಲ ಎಂದು ನಾನು ಮತ್ತೊಮ್ಮೆ ಅವರಿಗೆ ಖಾತ್ರಿಪಡಿಸಿದೆ. ನಂತರ ವಿದ್ಯಾರ್ಥಿಗಳು ಗೋಯಂಕಾಜಿಯವರ ಬಳಿ ಬಂದು, "ಗೋಯಂಕಾಜಿ ನಮಗೆ ವ್ಯಥೆಯಾಗಿದೆ. ನಮ್ಮ ಆಹಾರ ಸರಿಯಿಲ್ಲ ಎಂದು ನಮಗೆ ಗೊತ್ತು. ಆದರೆ ನಮ್ಮ ಹತ್ತಿರ ಇರುವುದು ಇಷ್ಟೇ. ಈ ಸ್ಥಳ ಪಟ್ಟಣದಿಂದ ಬಹಳ ದೂರವಿದೆ, ದಯವಿಟ್ಟು ನಮ್ಮನ್ನು ಕ್ಷಮಿಸಿ" ಎಂದು ಬೇಡಿಕೊಂಡರು. ಗೋಯಂಕಾಜಿಯವರು ನಕ್ಕು, "ಓ, ನಿಮ್ಮ ಊಟ ರುಚಿಯಾಗಿತ್ತು; ಅದರಲ್ಲಿ ನಿಮ್ಮ ಮೆತ್ತಾ ಇತ್ತು. ನೀವೆಲ್ಲರೂ ನಿಮ್ಮ ಸಾಧನೆಯ ಕಡೆ ಗಮನ ಹರಿಸಿ. ನನ್ನ ಬಗ್ಗೆ ಚಿಂತಿಸಬೇಡಿ. ನಾನು ಇಲ್ಲಿ ಬಹಳ ಆರಾಮವಾಗಿದ್ದೇನೆ" ಎಂದರು. ಆ ಶಿಬಿರದಲ್ಲಿ ಭಾಗವಹಿಸಿದ್ದ ಕೆಲವರು ಇಂದು ವಿಪಶ್ಯನ ಆಚಾರ್ಯರುಗಳಾಗಿದ್ದಾರೆ ಮತ್ತು ಧಮ್ಮದಲ್ಲಿ ಅನೇಕ ಜನರ ಸೇವೆ ಮಾಡಿದ್ದಾರೆ.

ನಂತರದಲ್ಲಿ ರಾಜಸ್ಥಾನದ ಅಜ್ಮೀರ್‌ನ ಹತ್ತಿರವಿರುವ ಪುಷ್ಕರ್ ಪಟ್ಟಣದಲ್ಲಿ ಒಂದು ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರ ಸಂಘಟನೆ ಮಾಡುತ್ತಿದ್ದ ವ್ಯಕ್ತಿಯು ವರ್ಣರಂಜಿತ ಮತ್ತು ಆಕರ್ಷಕ ಭಾಷೆಯಲ್ಲಿ ಹತ್ತು ದಿನದ ಶಿಬಿರದಲ್ಲಿ ಭಾಗವಹಿಸಲು ಆಮಂತ್ರಣ ಕಳುಹಿಸಿದ್ದರು. ಅವರ ಸುಂದರವಾದ ಪತ್ರ ವ್ಯವಹಾರ ಗೋಯಂಕಾಜಿಯವರಿಗೂ ಮೆಚ್ಚುಗೆಯಾಗಿ ಶಿಬಿರ ನಡೆಸಿಕೊಡಲು ಒಪ್ಪಿದರು.

ಆದರೆ ಶಿಬಿರ ನಡೆಸಲು ಒಂದು ಜಾಗ ಪಡೆದುಕೊಳ್ಳಲು ಸಂಘಟನಕಾರರಿಗೆ ಸಾಧ್ಯವಾಗಲಿಲ್ಲ. ಅಲ್ಲಿ ಬಹಳಷ್ಟು ಧರ್ಮಶಾಲೆಗಳಿದ್ದವು. ಆದರೆ ಅವುಗಳ ಆಡಳಿತಗಾರರು ಇದು ಬೌದ್ಧ ಸಂಪ್ರದಾಯ ಎಂದು ಹೆದರಿ, ಅವುಗಳನ್ನು ಬಾಡಿಗೆಗೆ ಕೊಡಲು ನಿರಾಕರಿಸಿದರು. ಅಜ್ಮೀರದಲ್ಲಿ ವಿಫಲರಾದ ಮೇಲೆ ಅವರು ಹತ್ತಿರದ ಯಾತ್ರಾ ಸ್ಥಳವಾದ ಪುಷ್ಕರ್‌ನಲ್ಲಿ ಶಿಬಿರ ನಡೆಸಲು ತೀರ್ಮಾನಿಸಿದರು. ಅದು ಹಬ್ಬಗಳ ಸಮಯವಲ್ಲದ್ದರಿಂದ ಧರ್ಮಶಾಲೆ ದೊರೆಯಿತು. ಆದರೆ ಇದನ್ನು ಕೊನೇ ಗಳಿಗೆಯಲ್ಲಿ ತೀರ್ಮಾನ ಮಾಡಿದ್ದರಿಂದ, ಅಜ್ಮೀರ್‌ನಿಂದ ಅಥವಾ ಹತ್ತಿರದ ಪ್ರದೇಶಗಳಿಂದ ಶಿಬಿರದಲ್ಲಿ ಭಾಗವಹಿಸಲು ಯಾರೂ ನೋಂದಣಿ ಮಾಡಿಸಿಕೊಂಡಿರಲಿಲ್ಲ.

ಆಗಿನ ಕಾಲದಲ್ಲಿ ಗೋಯಂಕಾಜಿಯವರು, ಸಾಮಾನ್ಯ ದರ್ಜೆಯ ಸ್ಲೀಪರ್ ಕೋಚ್‌ನಲ್ಲಿ ಪ್ರಯಾಣಿಸುತ್ತಿದ್ದರು. ನಾನು ಮತ್ತು ಗೋಯಂಕಾಜಿ ಇಬ್ಬರೂ ಒಟ್ಟಿಗೆ ಪ್ರಯಾಣಿಸುತ್ತಿದ್ದೆವು. ನಾವು ಅಜ್ಮೀರ್‌ಗೆ ಪ್ರಯಾಣಿಸುತ್ತಿದ್ದಾಗ ನಮ್ಮ ಎದುರಿಗೆ ಒಬ್ಬ ಸಾಧು (ಸಂನ್ಯಾಸಿ) ಕುಳಿತಿದ್ದರು. ಅವರಿಗೆ ಎಲ್ಲಿ ಇಳಿಯಬೇಕೆಂಬ ಗುರಿಯಿರಲಿಲ್ಲ. ಇಚ್ಛೆ ಬಂದ ಕಡೆ ರೈಲಿನಿಂದ ಇಳಿಯಲು ತಯಾರಿದ್ದರು. ಧ್ಯಾನ ಸಾಧನೆಗಳ ಬಗ್ಗೆ ಚರ್ಚಿಸಬೇಕಾದರೆ, ಧ್ಯಾನ ಶಿಬಿರದಲ್ಲಿ ಭಾಗವಹಿಸುವ ಇಚ್ಛೆ ವ್ಯಕ್ತಪಡಿಸಿದರು. ನಾಳೆಯೇ ಒಂದು ಶಿಬಿರ ಪ್ರಾರಂಭವಾಗುತ್ತಿದೆ, ನೀವೂ ನಮ್ಮ ಜೊತೆ ಪುಷ್ಕರ್‌ಗೆ ಬರಬಹುದು ಎಂದು ಗೋಯಂಕಾಜಿಯವರು ಹೇಳಿದರು. ಶಿಬಿರ ಸಂಘಟಿಸಿದ ವ್ಯಕ್ತಿಯು ನಮ್ಮನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು ಮತ್ತು ಮೂವರೂ ಒಟ್ಟಾಗಿ ಪುಷ್ಕರ್‌ಗೆ ಪ್ರಯಾಣ ಬೆಳೆಸಿದೆವು. ಸಾರ್ವಜನಿಕ ಅತಿಥಿ ಗೃಹಕ್ಕೆ 'ಯಾದವ ಧರ್ಮಶಾಲಾ' ಎಂದು ಹೆಸರಿಸಲಾಗಿತ್ತು. ಅಲ್ಲಿ ಒಂದೂ ಶೌಚಾಲಯ ಮತ್ತು ಸ್ನಾನದ ಮನೆ ಇರಲಿಲ್ಲ. ಕಟ್ಟಡದ ಹೊರಭಾಗದಲ್ಲಿ ಒಂದು ಒಣಗಿದ ಕಾಲುವೆಯಿತ್ತು. ಕಾಲುವೆಯ ಕಾಂಕ್ರೀಟ್ ತುದಿಯ ಮೇಲೆ ಹುಲ್ಲು ಮತ್ತು ಜೇಡಿಮಣ್ಣಿನ ನೆರಿಕೆಯಿಂದ ಸುತ್ತುವರಿದ ಮೇಲ್ಛಾವಣಿಯಿಲ್ಲದ ಶೌಚಾಲಯ ವ್ಯವಸ್ಥೆಯನ್ನು ಸಂಘಟನಕಾರ ತೋರಿಸಿದರು. ಇದು ನಾಲ್ಕು ಅಡಿ ಎತ್ತರವಿದ್ದು, ಏಕಾಂತತೆಗೆ ಸಾಕಾಗುವಷ್ಟಿತ್ತು. ಸ್ನಾನಕ್ಕಾಗಿ ಅಂಗಳದ ಒಂದು ಸಣ್ಣ ತುದಿಗೆ ಸುತ್ತಾ ಮರೆಕಟ್ಟಿದ ಜಾಗವನ್ನು ಸಿದ್ಧಪಡಿಸಲಾಗಿದ್ದನ್ನು ಸಂಘಟನಕಾರ ತೋರಿಸಿದರು. ಮಹಡಿಯಲ್ಲಿ ಯಾರೂ ವಾಸವಿಲ್ಲದ್ದರಿಂದ, ಇದು ತಕ್ಕಮಟ್ಟಿನ ಏಕಾಂತತೆ ಕೊಡುವಂತಿತ್ತು. ನಮ್ಮ ಅವಶ್ಯಕತೆಗಳಿಗಾಗಿ, ಕಾವಲುಗಾರ ಹತ್ತಿರದ ಬಾವಿಯಿಂದ ನೀರು ತರುತ್ತಿದ್ದ. ಅವನೇ ನಮ್ಮ ಅಡಿಗೆಯವನು ಮತ್ತು ಶುಚಿ ಮಾಡುವವನು. ಅವನಿಗೆ ಹೆಚ್ಚಿನ ತೊಂದರೆ ಕೊಡದಿರಲು, ಗೋಯಂಕಾಜಿಯವರು ಬಾವಿಯ ಕಟ್ಟೆಯ ಮೇಲೆಯೇ ಸ್ನಾನ ಮಾಡಲು ನಿರ್ಧರಿಸಿದರು. ಆ ಮುಖೇನ ಅವನು ಬಾವಿಯಿಂದ ಸ್ನಾನ ಮಾಡುವ ಜಾಗದವರೆಗೆ ನೀರು ಹೊತ್ತು ತರುವುದನ್ನು ತಪ್ಪಿಸಿದರು.

ಇಷ್ಟೊತ್ತಿಗೆ, ಶಿಬಿರದಲ್ಲಿ ಭಾಗವಹಿಸುವವರು ಕೇವಲ ಇಬ್ಬರೇ ಎಂಬುದು ಸ್ಪಷ್ಟವಾಗಿತ್ತು. ಒಬ್ಬರು ಸಂಘಟನಕಾರ, ಇನ್ನೊಬ್ಬರು ನಮ್ಮ ಜೊತೆ ಬಂದಿದ್ದ ಸಾಧು. ಆದರೆ ಗೋಯಂಕಾಜಿಯವರು ಕಿಂಚಿತ್ತೂ ನಿರಾಶೆಗೊಳ್ಳಲಿಲ್ಲ. ಬದಲಾಗಿ, ಅವರಿಬ್ಬರ ಜೊತೆ, ನಾನು ಮತ್ತು ನೀನು, ಇಬ್ಬರೂ ಕುಳಿತುಕೊಳ್ಳೋಣ ಎಂದು ಸಲಹೆಕೊಟ್ಟರು. ಶಿಬಿರದ ಗಾತ್ರ ಎರಡರಿಂದ ನಾಲ್ಕಕ್ಕೆ ದ್ವಿಗುಣವಾಯಿತು. ಆ ಸಣ್ಣ ಹಳ್ಳಿಯಲ್ಲಿ ಅಂಚೆ ವ್ಯವಸ್ಥೆ ನಿಧಾನವಾಗಿತ್ತು ಮತ್ತು ದೂರವಾಣಿ ವ್ಯವಸ್ಥೆ ಇರಲಿಲ್ಲ. ತತ್ಫಲವಾಗಿ ನಮ್ಮ ಶಿಬಿರ ಬಹಳ ನಿಶ್ಯಬ್ದವಾಗಿ ಮತ್ತು ಬಹಳ ಶಾಂತಿಯುತವಾಗಿ ನಡೆಯಿತು. ಗೋಯಂಕಾಜಿಯವರೂ ನಮ್ಮ ಜೊತೆ ಧ್ಯಾನ ಮಾಡಿದರು. ಜೊತೆಗೆ ಇತರೆ ಹತ್ತು ದಿನಗಳ ಶಿಬಿರದಲ್ಲಿ ಮಾಡುವಂತೆಯೇ ಈ ಶಿಬಿರದಲ್ಲಿಯೂ ಸಹ ಪ್ರವಚನಗಳನ್ನು ನೀಡಿದರು. ಈ ಹಿಂದೆ, ಯಾವಾಗಲೂ ಹತ್ತು ದಿನದ ಶಿಬಿರದಲ್ಲಿ ಭಾಗವಹಿಸದೇ ಇರುವ ಶಿಬಿರ ಸಂಘಟನಕಾರ, ತಾನು ಶ್ರೀಲಂಕಾದಲ್ಲಿ ಒಂದು ಪ್ರಮುಖವಾದ ಸಭೆಯಲ್ಲಿ ಭಾಗವಹಿಸಬೇಕಾಗಿರುವುದರಿಂದ 7 ದಿನ ಮಾತ್ರ ಶಿಬಿರದಲ್ಲಿರಲು ಸಾಧ್ಯ ಎಂದು ಗೋಯಂಕಾಜಿಯವರಿಗೆ ತಿಳಿಸಿದ. ಹಾಗಾಗಿ, 7ನೇ ದಿನ ಆದ ಮೇಲೆ ಶಿಬಿರದಲ್ಲಿ ಕೇವಲ ನಾವು ಮೂವರೇ ಇದ್ದೆವು. ಕಾವಲುಗಾರ ನಮಗೆ ಊಟ ಕೊಡುವುದನ್ನು ಮುಂದುವರಿಸಿದ. ಆ ದಿನ ಅವನು ತನಗಾಗಿ ಏನು ತಯಾರಿಸಿಕೊಳ್ಳುತ್ತಿದ್ದನೋ ಅದೇ ಊಟವನ್ನೇ ನಮಗೂ ಕೊಡುತ್ತಿದ್ದ. ನಮ್ಮ ಶಿಬಿರವು ಸಾಂಗವಾಗಿ ಕೊನೆಗೊಂಡಿತು. ಸಾಧುವು ಕೃತಜ್ಞತೆಯಿಂದ ತುಂಬಿ ಹೋದರು. ಅವರಿಗೆ ತಾವು ಹಿಮಾಲಯದಲ್ಲಿ ಕಳೆದ ಹನ್ನೆರಡು ವರ್ಷಗಳ ನೇಮನಿಷ್ಠೆಯ ಜೀವನ ವ್ಯರ್ಥ ಮತ್ತು ಈಗ ಮಾತ್ರ ನಾನು ನಿಜವಾದ ಅರ್ಥದಲ್ಲಿ ಸಂನ್ಯಾಸಿ ಎಂದು ಹೇಳಿದರು.

ಒಂದು ವರ್ಷ ಕಳೆದ ಮೇಲೆ, ಮ್ಯಾನ್ಮಾರ್‌ನಿಂದ ಮಾತಾಜಿಯವರು ಬಂದರು. ಪ್ರಾರಂಭದ ಸ್ವಲ್ಪ ದಿನಗಳು ಅವರು ಕುಟುಂಬ ಮತ್ತು ಮಕ್ಕಳ ಜೊತೆಗಿದ್ದರು. ನಂತರ ಅವರೂ ಸಹ ಧರ್ಮದ ಕೆಲಸದಲ್ಲಿ ಗೋಯಂಕಾಜಿಯವರಿಗೆ ಸಹಾಯ ಮಾಡತೊಡಗಿದರು. ಕುಟುಂಬ ಮತ್ತು ಮಕ್ಕಳ ಬಂಧನದಿಂದ ತಮ್ಮನ್ನು ಬಿಡಿಸಿಕೊಂಡು ತಮ್ಮ ಎಲ್ಲಾ ಸಮಯವನ್ನು ಧಮ್ಮ ಸೇವೆಗೆ ಮೀಸಲಿಟ್ಟರು. ಕಾಲಕ್ರಮೇಣ ಮಕ್ಕಳು ಬೆಳೆದು ದೊಡ್ಡವರಾಗಿ, ವಿದ್ಯಾಭ್ಯಾಸ ಮುಗಿಸಿ ತಮ್ಮ ಜೀವನವನ್ನು ರೂಪಿಸಿಕೊಂಡರು. ಗೋಯಂಕಾಜಿಯವರು ಶಿಬಿರ ಮುಗಿಸಿ ಮನೆಗೆ ಮರಳಿದ ಮೇಲೆ ತಮ್ಮ ಮಕ್ಕಳ ಜೊತೆ, ಅವರ ವ್ಯಾಪಾರದ ಅನುಭವಗಳನ್ನು ಮತ್ತು ಒಳನೋಟಗಳನ್ನು ಹಂಚಿಕೊಳ್ಳುತ್ತಿದ್ದರು. ಹಾಗೆಯೇ ಧಮ್ಮ ಸೇವೆಯಲ್ಲಿನ ತಮ್ಮ ಅನುಭವಗಳನ್ನೂ ಹಂಚಿಕೊಳ್ಳುತ್ತಿದ್ದರು. ಗೋಯಂಕಾಜಿಯವರು, ಅವರಿಗೆ ಧಮ್ಮ ಮಾರ್ಗದಲ್ಲಿನ ಸೇವೆಯ ಪ್ರಾಮುಖ್ಯತೆ ಮತ್ತು ಪ್ರಯೋಜನಗಳ ಬಗ್ಗೆ ಯಾವಾಗಲೂ ಒತ್ತುಕೊಟ್ಟು ಹೇಳುತ್ತಿದ್ದರು.

ಈ ರೀತಿಯಾಗಿಯೇ ಅವರು ಕೊನೆತನಕ ಬದುಕಿದರು. ಅವರು, ಅವರ ಗುರುಗಳು ಮತ್ತು ಧರ್ಮ ತಂದೆ ಸಯಾಜಿ ಉ ಬಾ ಖಿನ್‌ರವರ ಬಗ್ಗೆ ಮತ್ತು ಅವರು ಬೋಧಿಸಿದ ಧರ್ಮ ಮಾರ್ಗದ ಬಗ್ಗೆ ಕೊನೆತನಕ ಅದೇ ಅಪರಿಮಿತ ಶ್ರದ್ಧೆ, ಮಿತಿಯಿಲ್ಲದ ಪ್ರಯತ್ನ ಮತ್ತು ಸ್ಥಿರವಾದ ಪ್ರಾಮಾಣಿಕತೆ ಹೊಂದಿದ್ದರು. ತನ್ನ ಕೊನೆಯುಸಿರಿರುವ ತನಕ ಧಮ್ಮದ ಪರಿಶುದ್ಧತೆಯನ್ನು ಕಾಪಾಡುತ್ತೇನೆ ಎಂದು ತಮ್ಮ ಧಮ್ಮ ತಂದೆಗೆ ನೀಡಿದ ವಾಗ್ದಾನವನ್ನು ಈಡೇರಿಸಿದರು.

ಅವರ ಜೀವನದ ಕೆಲವು ಘಟನೆಗಳ ನೆನಪುಗಳನ್ನು ಹಂಚಿಕೊಳ್ಳುವ ಒತ್ತಡವನ್ನು ನಾನು ಅನುಭವಿಸಿದೆ. ಆದರೆ ನಾನು ಎಷ್ಟೇ ಬರೆದರೂ, ಎಷ್ಟೇ ಕತೆಗಳನ್ನು ಹೇಳಿದರೂ, ಈ ನೆನಪುಗಳಿಗೆ ನ್ಯಾಯ ಒದಗಿಸುವುದು ಕಷ್ಟ ಸಾಧ್ಯ. ಈಗ ಅವು ನನ್ನ ಉಳಿದ ಜೀವಿತಾವಧಿಗೆ ಹೃದಯದಲ್ಲಿರಿಸಿಕೊಂಡ ಒಡನಾಡಿಗಳು ಮತ್ತು ನಾನು ಧರ್ಮ ಮಾರ್ಗದಲ್ಲಿ ನಡೆಯಲು ನಿರಂತರ ಸ್ಫೂರ್ತಿಯ ಮೂಲವಾಗಿವೆ.

ಗೌರವಪೂರ್ವಕವಾಗಿ

**ರಾಮ್‌ಪ್ರತಾಪ್ ಯಾದವ್**

**ರಾಮ್‌ಪ್ರತಾಪ್‌ಜಿಯವರಿಂದ ಒಂದು ಸ್ಪಷ್ಟೀಕರಣ**

**ವಿಪಶ್ಯನ ವಾರ್ತೆಯ ಪ್ರಶ್ನೆ :** ಸರ್, ಮೊದಲನೇ ಶಿಬಿರದಲ್ಲಿ ನೀವು ಮತ್ತು ಇತರೆ ಶಿಬಿರಾರ್ಥಿಗಳು ಕಾಯಿಲೆ ಬಿದ್ದೆವು ಎಂದು ಹೇಳಿದ್ದೀರಿ. ನೀವು ಈ ಶಿಬಿರದಲ್ಲಿ ಶಿಬಿರಾರ್ಥಿಯಾಗಿ ಭಾಗವಹಿಸಿದ್ದಿರಾ? ಅಥವಾ ಚೆನ್ನೈನಲ್ಲಿ ನಡೆದ ಶಿಬಿರದಲ್ಲಿ ಭಾಗವಹಿಸಿದಿರಾ?

**ರಾಮ್‌ಪ್ರತಾಪ್ ಜಿ :** ಮೊದಲನೇ ಶಿಬಿರದಲ್ಲಿ ನಾನು ಗೋಯಂಕಾಜಿಯವರಿಂದ ಡಿಕ್ಟೇಷನ್ ತೆಗೆದುಕೊಂಡು ಆ ಪತ್ರಗಳನ್ನು ಬೆರಳಚ್ಚು ಮಾಡುತ್ತಿದ್ದೆ. ಆದರೆ ನಾನು ಆನಂದ ಮಾರ್ಗದ ಸಾಧನೆ ಮಾಡುತ್ತಿದ್ದೆ. ಇದು ಗೋಯಂಕಾಜಿಯವರಿಗೆ ಗೊತ್ತಿರಲಿಲ್ಲ. ಶಿಬಿರ ನಡೆಯುತ್ತಿದ್ದ ಸ್ಥಳದಲ್ಲಿ ನಾನು ಮಂತ್ರ ಸಾಧನೆ ಮಾಡುತ್ತಿದ್ದದ್ದು ನನಗೆ ಮತ್ತು ಇತರೆ ವಿದ್ಯಾರ್ಥಿಗಳಿಗೆ ತೊಂದರೆ ಉಂಟುಮಾಡಿತು. ಆಗ ಗೋಯಂಕಾಜಿಯವರು 6 ಅಥವಾ 7ನೇ ದಿನ ನನಗೆ ಆನಾಪಾನ ಧ್ಯಾನ ಹೇಳಿಕೊಟ್ಟರು. ಚೆನ್ನೈನಲ್ಲಿ ನಡೆದ ಶಿಬಿರದಲ್ಲಿ ನಾನು ಪ್ರಥಮ ಬಾರಿಗೆ ಶಿಬಿರಾರ್ಥಿಯಾಗಿ ಸೇರಿದೆ.

**'ಧಮ್ಮ ದೀಪ' ಧ್ಯಾನ ಕೇಂದ್ರದಲ್ಲಿ ಯುರೋಪಿನ ಸಹಾಯಕ ಆಚಾರ್ಯರುಗಳ ಸಭೆಯಲ್ಲಿ ಕೇಂದ್ರದ ಆಚಾರ್ಯರುಗಳು ಮಾಡಿದ ಸ್ವಾಗತ ಭಾಷಣ – ಏಪ್ರಿಲ್, 2014.**

ಸ್ನೇಹಿತರೇ,

ಈ ಸಭೆಯನ್ನು ಸಂಘಟಿಸಿರುವ ಇಂಗ್ಲೆಂಡಿನ(ಯು.ಕೆ.) ವಿಪಶ್ಯನ ಟ್ರಸ್ಟ್‌ನ ಪರವಾಗಿ, ಮತ್ತು ಈ ವಾರ ಸೇವೆ ಮಾಡಲು ಮುಂದೆ ಬಂದಿರುವ ಎಲ್ಲಾ ಧಮ್ಮ ಸೇವಕರ ಪರವಾಗಿ, ನಮ್ಮ ಎಲ್ಲಾ ಧಮ್ಮ ಸಹೋದರ–ಸಹೋದರಿಯರನ್ನು, ಗೋಯಂಕಾಜಿಯವರ ಸಹಾಯಕರನ್ನು ಸ್ವಾಗತಿಸುವುದು ಸಂತೋಷದ ವಿಷಯ. ನಿಮ್ಮ ಪ್ರಯಾಣ ಸುಖಕರವಾಗಿತ್ತೆಂದು ಭಾವಿಸುತ್ತೇವೆ. ಜೊತೆಗೆ ಈ ಸಭೆಯು ತುಂಬಾ ಉತ್ತೇಜನಕಾರಿಯಾಗಲಿ, ಸ್ಫೂರ್ತಿದಾಯಕವಾಗಲಿ ಮತ್ತು ಶಕ್ತಿದಾಯಕವಾಗಲಿ ಎಂದು ಆಶಿಸುತ್ತೇವೆ.

ನಮ್ಮ ಪ್ರೀತಿಯ ಧಮ್ಮ ಮಾರ್ಗದರ್ಶಕರು ಮತ್ತು ಧಮ್ಮ ತಂದೆಯವರಾದ ಪೂಜ್ಯ ಗೋಯಂಕಾಜಿಯವರು ಮರಣ ಹೊಂದಿ ನಿನ್ನೆಗೆ 7 ತಿಂಗಳಾಯಿತು. ಇದು ಆ ನಂತರದ ಮೊದಲನೆಯ ಯುರೋಪಿನ ಕೂಟ(ಸಭೆ). ಅವರು ಕಾಲವಾದ ನಂತರವೂ ಧಮ್ಮ ಚಕ್ರವು ಮೊದಲಿನಂತೆಯೇ ತಿರುಗುತ್ತಿದೆ ಮತ್ತು ಧಮ್ಮವು ಪ್ರಪಂಚದ ನಾಲ್ಕು ದಿಕ್ಕುಗಳಿಗೂ ಹರಡುತ್ತಿದೆ. ಇದು ಅವರು ನಮಗೆಲ್ಲಾ ನೀಡಿರುವ ಧಮ್ಮ ಶಕ್ತಿಯ ಮಾಪಕವಾಗಿದೆ. ಧ್ಯಾನ ಶಿಬಿರಗಳಿಗೆ ಬರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ನಿರಂತರವಾಗಿ ಹೆಚ್ಚುತ್ತಿದೆ. ಧಮ್ಮ ದೀಪದಲ್ಲಿ ನಡೆಯುವ ಶಿಬಿರಗಳ ನೋಂದಣಿಯು ಪ್ರಾರಂಭವಾದ ಕೆಲವೇ ಗಂಟೆಗಳಲ್ಲಿ ಸೀಟುಗಳು ಭರ್ತಿಯಾಗುತ್ತವೆ. ನೋಂದಣಿಯು ಪ್ರಾರಂಭವಾದ ದಿನ ಕೆಲಸ ಮುಗಿಸಿ ಮನೆಗೆ ಹೋಗಿ ನೋಂದಣಿ ಮಾಡಲು ಕಂಪ್ಯೂಟರ್ ಆನ್ ಮಾಡಿದರೆ, ಆಗಲೇ ಕಾಯ್ದಿರಿಸಿರುವ ಪಟ್ಟಿ (waiting list) ಪ್ರಾರಂಭವಾಗಿರುತ್ತದೆ ಎಂದು ಜನರು ನಮ್ಮ ನೋಂದಣಿದಾರರಿಗೆ ಹೇಳುತ್ತಾರಂತೆ. ಗೋಯಂಕಾಜಿಯವರು ಈಗ ಇಲ್ಲದಿರುವ ವಿಷಯ ತಿಳಿದ ಹೊಸ ವಿದ್ಯಾರ್ಥಿಗಳು ನಮ್ಮ ಬಳಿ ಬಂದು, ನಿಮಗೆ ಅವರು ಗೊತ್ತಿತ್ತಾ? ನೀವು ಅವರನ್ನು ಭೇಟಿ ಮಾಡಿದ್ದೀರಾ? ನಿಜ ಜೀವನದಲ್ಲಿ ಅವರು ಯಾವ ರೀತಿ ಇದ್ದರು? ವಿಡಿಯೋದಲ್ಲಿ ಕಾಣುವಂತೆಯೇ ಇದ್ದರೇ? ಎಂದು ಆಶ್ಚರ್ಯಚಕಿತರಾಗಿ ಕೇಳುತ್ತಾರೆ. ಹೌದು ಎಂದು ನಾವು ಉತ್ತರಿಸುತ್ತೇವೆ.

ನಮ್ಮ ಜೀವನದ ಪವಿತ್ರ ಉದ್ದೇಶವೆಂದರೆ, ಗೋಯಂಕಾಜಿಯವರ ಮರಣಾನಂತರ ತಮ್ಮ ಪ್ರಥಮ ಶಿಬಿರ ತೆಗೆದುಕೊಳ್ಳುತ್ತಿರುವವರಿಗೆ, ಮತ್ತು ಅಂತಿಮವಾಗಿ, ಅವರ ಜೀವಿತಾವಧಿಯಲ್ಲಿ ಹುಟ್ಟಿಲ್ಲದೇ ಇದ್ದವರಿಗೂ ಈ ಅಮೂಲ್ಯ

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.**

ಕೊಡುಗೆಯಾದ ಧಮ್ಮವನ್ನು ವರ್ಗಾಯಿಸುವುದು. ಗೋಯಂಕಾಜಿಯವರು ಈಗ ಚರಿತ್ರೆಯ ಭಾಗವಾಗಿದ್ದಾರೆ ಮತ್ತು ನಿಜವಾಗಿಯೂ ಅವರು ಚರಿತ್ರೆಯನ್ನು ಸೃಷ್ಟಿಸಿದ್ದಾರೆ. ಪಾಶ್ಚಿಮಾತ್ಯ ಪತ್ರಿಕೆಗಳು, ರೂಢಿಯಂತೆ ವಿಶ್ವದ ರಾಜಕಾರಣಿಗಳು ಬರುವ ಮತ್ತು ಹೋಗುವ, ಯುದ್ಧಗಳು ಮತ್ತು ಅವಗಡಗಳ ನಿರಾಶಾದಾಯಕ ಸುದ್ದಿಗಳಿಂದ ತುಂಬಿದ್ದವು. ಮಾನವ ಜಗತ್ತಿಗೆ ಮತ್ತು ಅದು ಹುಡುಕುವ ನಿಜ ಸಂತೋಷಕ್ಕೆ ನಿಜವಾಗಿಯೂ ಮುಖ್ಯರಾದ ಒಬ್ಬ ವ್ಯಕ್ತಿಯ ಸಾವಿನ ಸುದ್ದಿಯನ್ನು ಬಹುತೇಕ ಪತ್ರಿಕೆಗಳು ಗಮನಿಸಲಿಲ್ಲ. ಅವರ ಅಸಾಧಾರಣ ಕೊಡುಗೆಯೆಂದರೆ, ತನ್ನ ಜನ್ಮ ಭೂಮಿಯಲ್ಲಿ ಸಂಪೂರ್ಣ ನಶಿಸಿ ಹೋಗಿದ್ದ ಧಮ್ಮವನ್ನು ತನ್ನ ಮೂಲ ನೆಲೆಗೆ ಮರಳಿ ತಂದು, ಅಲ್ಲಿಂದ ಪ್ರಪಂಚದಾದ್ಯಂತ, ಇದುವರೆವಿಗೂ ಹೋಗಿರದ ದೇಶಗಳಿಗೂ ಹರಡುವಂತೆ ಮಾಡಿದ್ದು. ಎಂತಹ ಬೃಹತ್ ಪ್ರಮಾಣದ ಸಾಧನೆ! ಬುದ್ಧರ ಬೋಧನೆಯ ಎರಡನೆಯ ಅವಧಿಯ ಪ್ರಾರಂಭದಲ್ಲಿ ಇಂತಹ ಪ್ರಧಾನ ಪಾತ್ರ ವಹಿಸಲು ಎಂತಹ ಅದ್ಭುತವಾದ ಶಕ್ತಿ ಮತ್ತು ಶ್ರದ್ಧೆಯನ್ನು ಅವರು ಹೊಂದಿದ್ದರು! ಅವರು ಬದುಕಿದ್ದಾಗ, ಖಚಿತವಾಗಿಯೂ ನಾವೆಲ್ಲಾ ಅವರು ಮನದಟ್ಟು ಮಾಡಿದ್ದ ಅಗಾಧವಾದ ಜವಾಬ್ದಾರಿ ಹೊಂದಿದ್ದೆವು. ಅದೇಂದರೆ, ಧಮ್ಮದ ಜೀವನ ನಡೆಸುವುದು. ಆದರೆ ಈಗ ಜವಾಬ್ದಾರಿ ಇನ್ನೂ ಹೆಚ್ಚು ದೊಡ್ಡದಾಗಿದೆ. ಧಮ್ಮವನ್ನು ಹರಡುವ ಅವರ ಕೆಲಸವನ್ನು ಮುಂದುವರಿಸುವುದು. ಏನೇ ಆದರೂ ನಾವು ಸಾಧನಾ ವಿಧಿಯ ಪರಿಶುದ್ಧತೆ ಮತ್ತು ಫಲಪ್ರದತೆಯನ್ನು, ಅದು ಹರಡುತ್ತಿರುವ ವೇಗವನ್ನು ಕಾಪಾಡಬೇಕು. ಗೋಯಂಕಾಜಿಯವರಿಲ್ಲದೆ ಒಬ್ಬಂಟಿಗರಾಗಿ ನಾವೇ ನಿರ್ವಹಿಸಬೇಕಾದ ಸ್ಥಿತಿ ನಮ್ಮನ್ನು ಎದೆಗುಂದಿಸಬಹುದು. ವಾಸ್ತವವಾಗಿ ನಾವು ಒಬ್ಬಂಟಿಗರಲ್ಲ. ನಮ್ಮ ಎಲ್ಲಾ ಧಮ್ಮ ಸ್ನೇಹಿತರಲ್ಲದೆ ಧಮ್ಮದ ರಕ್ಷಣೆ ನಮಗಿದೆ, ಮತ್ತು ಗೋಯಂಕಾಜಿಯವರು ನಮಗೆ ನೀಡಿದ ಮಾರ್ಗದರ್ಶನ ಮತ್ತು ಆಳವಾದ ವಿವೇಕ ನಮ್ಮೊಟ್ಟಿಗಿದೆ. ಧಮ್ಮ ಪೀಠದ ಮೇಲೆ ನಾವು ಕುಳಿತಾಗ ಶಿಬಿರ ನಡೆಸುತ್ತಿರುವವರು ನಾವಲ್ಲ, ಅವು ಗೋಯಂಕಾಜಿಯವರ ಶಿಬಿರಗಳು ಎಂಬ ಭಾವನೆ ನಮ್ಮಲ್ಲಿ ಮೂಡಿದೆ. ಭೌತಿಕವಾಗಿ ಅವರು ನಮ್ಮೊಂದಿಗಿಲ್ಲದಿದ್ದರೂ, ಈ ಹಿಂದಿನಂತೆಯೇ ಅವರು ನಮ್ಮೊಂದಿಗಿದ್ದಾರೆ ಎನಿಸುತ್ತದೆ. ಈ ರೀತಿಯಾಗಿ ನಾವು ಧಮ್ಮದ ಪರಿಕರಗಳಾಗುತ್ತೇವೆ ಮತ್ತು ಗೋಯಂಕಾಜಿಯವರ ಸೇವಕರಾಗುತ್ತೇವೆ, ನಮ್ಮ ಅಹಮ್ಮಿಗಲ್ಲ. ಸ್ವತಃ ಗೋಯಂಕಾಜಿಯವರೇ ಅಪರಿಮಿತ ಕೃತಜ್ಞತೆ ಹೊಂದಿದ್ದ ಆಚಾರ್ಯರುಗಳ ಸಾಲಿನಲ್ಲಿ ಮುಂದುವರಿಯುತ್ತೇವೆ. ಅದೇ ತರಹದ ಅಪರಿಮಿತ ಕೃತಜ್ಞತೆಯನ್ನು ನಾವು ಗೋಯಂಕಾಜಿಯವರ ಬಗ್ಗೆ ಹೊಂದಿದ್ದೇವೆ. ತಮ್ಮ ಒಂದು ಪ್ರವಚನದಲ್ಲಿ ಗೋಯಂಕಾಜಿಯವರು ಚಲಿಸುವ ಗಾಡಿಯ ಕೆಳಗೆ ನಡೆದು ಹೋಗುತ್ತಿರುವ ನಾಯಿಮರಿಯ ಕತೆ ಹೇಳುತ್ತಾರೆ. ಗಾಡಿಯ ನೆರಳಿನಲ್ಲಿ ನಾಯಿಮರಿಯು ಚಲಿಸುತ್ತಿದ್ದರೂ, ನಾನೇ ಗಾಡಿಯನ್ನು ಮುನ್ನಡೆಸುತ್ತಿದ್ದೇನೆ ಎಂಬ ಭಾವನೆ ಅದಕ್ಕೆ ಬರುತ್ತದೆ. ಅದೇ ರೀತಿ, ನಮ್ಮ ಜವಾಬ್ದಾರಿಗಳು ನಮಗೆ ಹೊರೆಯಾಗಿವೆ ಎನಿಸಬಾರದು. ಏಕೆಂದರೆ, ನಾವು ಗೋಯಂಕಾಜಿಯವರ ನೆರಳಿನ ರಕ್ಷಣೆಯಲ್ಲಿ ನಡೆಯುತ್ತಿದ್ದೇವೆ. ಎಲ್ಲವೂ ನಮ್ಮನ್ನು ಅವಲಂಬಿಸಿಲ್ಲ. ವಿಪಶ್ಯನದ ಸಮಯ ಬಂದಿದೆ. ಪ್ರಧಾನ ಆಚಾರ್ಯರ ನೇರ ಸಂಪರ್ಕಕ್ಕೆ ಬಂದ ಅನೇಕ ಭಾಗ್ಯವಂತರಲ್ಲಿ ನಾವೂ ಕೆಲವರು.

**ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ಶಿಬಿರಗಳು :** ಶಾಲೆಗಳಲ್ಲಿ ಮಕ್ಕಳಿಗಾಗಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ 70 ನಿಮಿಷದ ಆನಾಪಾನ ಧ್ಯಾನವನ್ನು ಹೇಳಿಕೊಡಲಾಗುತ್ತದೆ. ಸಂಪರ್ಕ ಸಂಖ್ಯೆಗಳು: 9880421155 / 9480581708 / 8762086089

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2018** ಫೆಬ್ರವರಿ 28–11 ಮಾರ್ಚ್, 14–25, 4–15 ಏಪ್ರಿಲ್, 2–13 30ಮೇ–10ಜೂನ್, 13–24 ಜೂನ್, 27–8 ಜುಲೈ,11–22 ಜುಲೈ, 25–5 ಆಗಸ್ಟ್, 8–19, ಸೆಪ್ಟಂಬರ 1–12, 19–30.ಅಕ್ಟೋಬರ್ 10–21, 24–4 ನವೆಂಬರ್ 19–17, 21–2 ಡಿಸೆಂಬರ್ 5–16, 19–30. **ಮೂರು ದಿನದ ಶಿಬಿರ:** ಮಾರ್ಚ್ 29 ರಿಂದ ಏಪ್ರಿಲ್ 1. **ಎರಡು ದಿನದ ಶಿಬಿರ:** 25–27ಮೇ, 14–16ಸೆಪ್ಟಂಬರ್, 6–8ಅಕ್ಟೋಬರ್. **ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377, ಇ–ಮೇಲ್:info@paphulla.dhamma.org;
website: www.dhamma.org.

## ವಾರದ ಒಂದು ಗಂಟೆಯ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಬೆಂಗಳೂರು: ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593. **ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220. **ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ:**
**http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.